ದಿನಾಂಕ 21-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 12 ನೇ ಪ್ರತಿವಾದಿಯರ ಪರ ಶ್ರೀ ಆರ್.ಕೆ.ಎಸ್., ವಕೀಲರಿಂದಃ

18. ನನಗೆ ಹೆರ್ಗ ಗ್ರಾಮ, ಮುಂಡುಬೆಟ್ಟಿನ ಕೃಷ್ಣಯ್ಯ ಆಚಾರ್ಯ ರ ಮಗ ತಮ್ಮಯ್ಯ ಆಚಾರ್ಯರ ಪರಿಚಯ ಇಲ್ಲ. ಸದರಿ ತಮ್ಮಯ್ಯ ಆಚಾರ್ಯರವರು ಸಂಕ್ರಯ್ಯ ಆಚಾರ್ಯರರ ಹೆಂಡತಿಯ ತಂದೆಯ ಸಹೋದರನ ಮಗ ಎಂದರೆ ಸರಿಯಲ್ಲ. ನಿಪಿ.14 ಮರಣ ಶಾಸನಕ್ಕೆ ಸಾಕ್ಷಿದಾರರಾದ ಕೇಶವ ಆಚಾರ್ಯ ಹಾಗೂ ರುದ್ರಯ್ಯ ಆಚಾರ್ಯ ಜೀವಂತ ಇಲ್ಲ. ಸದರಿಯವರ ಮರಣ ಪ್ರಮಾಣ ಪತ್ರ ಹಾಜರುಪಡಿಸಿಲ್ಲ, ಹಾಜರುಪಡಿಸಬಹುದು. ಸದರಿಯವರು ಮೃತಪಟ್ಟ ದಿನಾಂಕ ನನಗೆ ಗೊತ್ತಿಲ್ಲ. ಕೇಶವ ಆಚಾರ್ಯ ಏಪ್ರಿಲ್ 2012 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರುದ್ರಯ್ಯ ಆಚಾರ್ಯ 2011 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರ ಮರಣಾನಂತರ ನಿಪಿ.14 ನ್ನು ಸೃಷ್ಟಿಸಿ ಸದರಿ ವ್ಯಕ್ತಿಗಳನ್ನು ಸಾಕ್ಷಿದಾರರನ್ನಾಗಿ ಕಾಣಿಸಿರುತ್ತೇವೆ ಎಂದರೆ ಸರಿಯಲ್ಲ. ಜೀವಂತ ಇರುವ ವ್ಯಕ್ತಿಗಳು ನಿಪಿ.14 ನ್ನು ರುಜುವಾತುಪಡಿಸಲು ಅಸಾಧ್ಯ ಎನ್ನುವ ಕಾರಣಕ್ಕೆ ಸಂಕ್ರಯ್ಯ ಆಚಾರ್ಯ ಮರಣ ಹೊಂದಿದ ನಂತರ ಮರಣ ಹೊಂದಿದ ವ್ಯಕ್ತಿಗಳ ಸಾಕ್ಷಿಯನ್ನು ನಿಪಿ.14 ರಲ್ಲಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

13. ನಿಪಿ.14 ರ ಸಾಕ್ಷಿದಾರರಿಗೆ ಹಾಗೂ ಸಂಕ್ರಯ್ಯ ಆಚಾರ್ಯರಿಗೆ ಯಾವುದೇ ರೀತಿ ಸಂಬಂದ ಹಾಗೂ ಸಂಪರ್ಕ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಕ್ರಯ್ಯ ಆಚಾರ್ಯರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿದೆ ಎಂದರೆ ಸರಿ. ನಿಪಿ.1 ರಿಂದ 3 ರಲ್ಲಿ ಸಂಕ್ರಯ್ಯ ಆಚಾರಿ ಎಂದು ನಮೂದಿಸಿದೆ ಎಂದರೆ ಸರಿ. ನಿಪಿ.14 ರಲ್ಲಿ ಸಂಕ್ರಯ್ಯ ಆಚಾರ್ಯ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆಚಾರಿ ಹಾಗೂ ಆಚಾರ್ಯ ಎಂದರೆ ಒಂದೇ ಉಪನಾಮ ಎನ್ನುತ್ತಾರೆ. ನಿಪಿ.14 ರಲ್ಲಿ ಸಂಕ್ರಯ್ಯ ಆಚಾರ್ಯರಿಗೆ ಸಂಬಂದವಿಲ್ಲದ ಛಾಪಾ ಕಾಗದವನ್ನು ಉಪಯೋಗಿಸಿರುತ್ತೇವೆ ಎಂದರೆ

ಸರಿಯಲ್ಲ. ರಾಮಯ್ಯ ಆಚಾರ್ಯರ ಮಕ್ಕಳಾದ ಪ್ರತಿವಾದಿ ನಂಬ್ರ.1 ರಿಂದ 11 ರವರೇ ಹತ್ತಿರದ ಸಂಬಂದದ ನೆಲೆಯಲ್ಲಿ ದಾವಾ ಆಸ್ತಿಯ ವಾರೀಸುದಾರರು ಎಂದರೆ ಸರಿಯಲ್ಲ. ಅದೇ ನೆಲೆಯಲ್ಲಿ ತಹಶೀಲ್ದಾರರು ಸದರಿಯವರ ವಾರೀಸು ಪ್ರಕಾರ ಪಹಣಿ ಪತ್ರಿಕೆ ಎಂಟ್ರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖಾತಾ ಬದಲಾವಣೆಯನ್ನು ಸಂಕ್ರಯ್ಯ ಆಚಾರ್ಯರ ಇತರ ಸಂಬಂದಿಕರು ಹಾಗೂ ಹೆಂಡತಿ ಕಡೆಯ ಸಂಬಂದಿಕರು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ, ಅವರಿಗೆ ಯಾರೂ ಸಂಬಂದಿಕರು ಇಲ್ಲ ಎನ್ನುತ್ತಾರೆ.

14. ಸಾಕ್ಷಿದಾರರಿಗೆ ಈಗ 01 ಫೋಟೋ ತೋರಿಸಲಾಗಿ, ಸದರಿ ಫೋಟೋದಲ್ಲಿ ಕಾಣಿಸುವ ಮನೆಯನ್ನು 12 ನೇ ಪ್ರತಿವಾದಿ ಸಂಘದವರು ನಿರ್ಮಿಸುತ್ತಿದ್ದಾರೆ ಎಂದರೆ ಸಾಕ್ಷಿ, ಈಗ ಅವರು ನಿರ್ಮಾಣ ಪ್ರಾರಂಭಿಸಿರಬಹುದು ಎಂದು ಹೇಳಿದ್ದು, ಸದರಿ ದಾಖಲಾತಿಯನ್ನು ಒಪ್ಪಿಕೊಂಡ ಪ್ರಕಾರ ನಿಡಿ.6 ಎಂದು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ನಿಪಿ.14 ರ ಪ್ರಕಾರ ವಾದಿ ಒಕ್ಕೂಟಕ್ಕೆ ಯಾವುದೇ ಹಕ್ಕು ಲಭ್ಯವಾಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯರ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.